# ಆಹಾ ಸುದ್ದಿ!

★ ಸಸಿತೋಟ



ನೀಳ ಕಾಲುಗಳ ಮೋಡಿಯ ಜಾದೂ ಅದಕ್ಕೊಳಗಾದವರಿಗೇ ಗೊತ್ತು. ಚೀನಾದ ಹೊರಾಂಗಣ ಬಾರ್ ಮಾಲೀಕರು ಇದನ್ನೇ ನಗದೀಕರಣ ಮಾಡಿಕೊಳ್ಳಲು ಹೊರಟಿದ್ದು, ನೀರೆಯ ಕಾಲಿನ ವಿನ್ಯಾಸದಲ್ಲಿರುವ ಬಾರ್ ಸ್ಟೂಲ್ ನೋಡಿಯೇ ಗ್ರಾಹಕರು ಮುಗಿ ಬೀಳುತ್ತಿದ್ದಾರಂತೆ, ಮತ್ತೇರಿಸಲು ಮತ್ತೇಕೆ ಗ್ಲಾಸ್ ಬೇಕು!



ಜಕಾರ್ತಾದಲ್ಲಿ ಮಧುಚಂದ್ರದ ಜೋಶ್‌ನಲ್ಲಿರುವ ಕಪ್ಪೆ ಜೋಡಿ ದ್ರಾಕ್ಷಿ ಬಳ್ಳಿ ಹಿಡಿದು ಉಯ್ಯಾಲೆಯಾಡುತ್ತಿದೆ. ಪುಕ್ಕಟೆ ಮಧುಚಂದ್ರದ ಪ್ಯಾಕೇಜ್‌ಗೊಂದು ಒಳ್ಳೆಯ ಐಡಿಯಾ.

ನ್ಯೂಯಾರ್ಕ್‌ನಲ್ಲಿ ವೇಶ್ಯಾವಾಟಿಕೆಯೊಂದರಲ್ಲಿ ಇಬ್ಬರು ಯುವತಿಯರ ಮಧ್ಯೆ ಜಗಳ ನಡೆಯಿತಂತೆ. ಆಫ್ರಿಕಾ ಎಂಬಾಕೆ ತನ್ನ 80 ಡಾಲರ್ ಕದ್ದಿದ್ದಾಳೆ, ಇದನ್ನು ಕುಸ್ತಿ ಮೂಲಕ ನಿರ್ಣಯಿಸಬೇಕು ಎಂದು ಘಟವಾಣಿಯೊಬ್ಬಳು ಪಟ್ಟು ಹಿಡಿದಳಂತೆ. ಆಫ್ರಿಕಾ 'ಸರಿ, ನಗ್ನ ಕುಸ್ತಿ' ಎಂದು ಘೋಷಿಸಿ ಅಖಾಡಕ್ಕಿಳಿದಳಂತೆ. ವೇಶ್ಯಾವಾಟಿಕೆ ಮ್ಯಾನೇಜರ್ ಕ್ಯಾಮೆರಾ ಹಿಡಿದರೆ, ಸಹಾಯಕ ತೀರ್ಪುಗಾರನಾದ. ಸೋತ ಆಫ್ರಿಕಾ ಪಕ್ಕದ ಚರ್ಚ್‌ಗೆ ಓಡಿ ಹಲ್ಲೆಯ ದೂರು ನೀಡಿ ಉಡುಪು ಧರಿಸಿದಳಂತೆ. ಈಗ 80 ಡಾಲರ್ ಕಳೆದುಕೊಂಡವಳಿಗೆ, ಮ್ಯಾನೇಜರ್‌ಗೆ ಉಡುಪು ಧರಿಸಿದ್ದರೂ ರಸ್ತೆಯಲ್ಲೇ ನಗ್ನರಾದ ಅನುಭವವಾಗುತ್ತಿದೆಯಂತೆ.

ಬ್ರಿಟನ್ನಿನ 'ಸಮ್‌ಥಿಂಗ್ ಲಾಂಗ್ ಆ್ಯಂಡ್ ಕಾಂಪ್ಲಿಕೇಟೆಡ್' ಅವಸ್ಥೆಯನ್ನು ಫೇಸ್‌ಬುಕ್ ಇನ್ನಷ್ಟು ಕಾಂಪ್ಲಿಕೇಟೆಡ್ ಮಾಡಿದೆಯಂತೆ. 30ರ ಹರಯದ ವಿಲಿಯಂ ಎಂಬಾತ ಎಂಟು ವರ್ಷಗಳ ಹಿಂದೆ ತನ್ನ ಹೆಸರನ್ನು ಕಾನೂನುಬದ್ಧವಾಗಿ 'ಸಮ್‌ಥಿಂಗ್ ಲಾಂಗ್ ಆ್ಯಂಡ್ ಕಾಂಪ್ಲಿಕೇಟೆಡ್' ಎಂದು ಬದಲಾಯಿಸಿಕೊಂಡಿದ್ದು, ಈಗ ಫೇಸ್‌ಬುಕ್‌ನಲ್ಲಿ ಲಾಗಿನ್ ಆಗಲು ಹೋದರೆ ಐಡೆಂಟಿಟಿ ಪ್ರೂಫ್ ಕೇಳುತ್ತದಂತೆ. ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಇ-ಮೇಲ್ ಖಾತೆ.. ಹೀಗೆ ಎಲ್ಲಾ ರೀತಿಯ ಪ್ರೂಫ್ ಕೊಟ್ಟರೂ ಈ 'ಸಮ್‌ಥಿಂಗ್ ಲಾಂಗ್' ಮಾತು ಫೇಸ್‌ಬುಕ್‌ಗೆ ಕೇಳುತ್ತಿಲ್ಲ ಎಂದರೆ ಅದು ಫೇಸ್‌ಬುಕ್ ಕಾಂಪ್ಲಿಕೇಶನ್ಸ್ ಅಲ್ಲವಂತೆ.



ಬ್ರಿಟನ್ನಿನಲ್ಲಿ ರಸ್ತೆ ಬದಿ ಇರುವ ಅತ್ಯಂತ ಪುಟ್ಟದಾದ ಪಾರ್ಕಿಂಗ್ ಜಾಗವಿದು. ಕೇವಲ ಒಂದೂವರೆ ಅಡಿ. ಮಕ್ಕಳ ಆಟಿಕೆ ಕಾರು ಹಿಡಿಸಬಹುದಷ್ಟೇ. ಟ್ರಾಫಿಕ್ ಸಮಸ್ಯೆಯಿಂದಾಗಿ ಎಲ್ಲವೂ ನ್ಯಾನೊ ಆಗಿದೆ ಅಲ್ಲಿ.



ಎಸ್ಟೋನಿಯಾದ ಕಾಡಿನಲ್ಲಿ ಸ್ಥಾಪಿಸಲಾಗಿರುವ ಮರದ ಮೆಗಾಫೋನ್. ಅರಣ್ಯ ಗ್ರಂಥಾಲಯ ನಿರ್ಮಾಣಕ್ಕೆ ಸ್ಫೂರ್ತಿ ಪಡೆಯುವಂತೆ ಅಲ್ಲಿಯ ವಾಸ್ತುಶಿಲ್ಪ ಕಲಾ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳನ್ನು ಕಾಡಿಗೆ ಕಳಿಸಿದ್ದರಂತೆ. ಎಸ್ಟೋನಿಯ ಚಳಿಯಲ್ಲಿ ಹೊರಾಂಗಣ ಗ್ರಂಥಾಲಯ ನಿರ್ಮಿಸಿದರೆ ಪುಸ್ತಕಗಳ ಗತಿ ಏನಾಗುತ್ತದೆ ಎಂದು ಜ್ಞಾನೋದಯವಾದ ವಿದ್ಯಾರ್ಥಿಗಳು ಕಾಡಿನಲ್ಲಿ ಮೂರು ಮೆಗಾಫೋನ್ ನಿರ್ಮಿಸಿದ್ದಾರಂತೆ, ಶಿಕ್ಷಕರು ಅಲ್ಲಿಗೆ ಬಂದು ಮೆಗಾಫೋನ್‌ನಲ್ಲಿ ಕುಳಿತು ಜ್ಞಾನೋದಯ ಮಾಡಿಕೊಳ್ಳಲೆಂದು ಇರಬಹುದು.